

# ಸುರಲ್ ಜಲಪಾತ

ಮರೆಯಲ್ಲೇ ಮನಸೂರೆಗೊಳಿಸೋ ವೈಖರಿ...
ಕಂಡರೂ ಕಾಣದಂತೆ ಹರಿಯೋ ಜಲಸಿರಿ...
ಮನಕ್ಕೆ ಮುದನೀಡೋ ಅಮೃತಧಾರೆ...

★ ಚಿತ್ರ-ಬರಹ:
ಮಲ್ಲಿಕಾರ್ಜುನ ದಾನನ್ನವರ



ಕಣಕುಂಬಿಯಲ್ಲಿರುವ ಪುರಾತನ ಕಾಲದ ಮಾವೂಲಿ ದೇವಸ್ಥಾನ



ಮಾವೂಲಿ ದೇವಸ್ಥಾನದ ಪಕ್ಕದಲ್ಲಿರುವ ಕಲ್ಯಾಣಿ

ಕರ್ನಾಟಕ ಮತ್ತು ಗೋವಾ ರಾಜ್ಯದ ಗಡಿ ಕಣಿವೆಯಲ್ಲಿ ಕಾಣಸಿಗುವ 'ಸುರಲ್ ಫಾಲ್ಸ್' ಒಂದು ಮನಮೋಹಕ ತಾಣ. ಇದು ಬೆಳಗಾವಿ–ಗೋವಾ ರಾಜ್ಯ ಹೆದ್ದಾರಿಯಲ್ಲಿ ಬೆಳಗಾವಿಯಿಂದ 50 ಕಿ.ಮೀ ದೂರದಲ್ಲಿದೆ. 'ಪೋರ್ಚುಗಲ್ ಪಾಯಿಂಟ್' ಎಂದು ಕರೆಯಲ್ಪಡುವ ಸುರಲ್ ಫಾಲ್ಸ್, ಹಾಲಿನ ನೊರೆಯಂತೆ (ಸುಮಾರು 100 ಅಡಿ ಎತ್ತರದಿಂದ) ಧುಮ್ಮಿಕ್ಕುತ್ತದೆ. ಕನ್ನಡ ನೆಲದಲ್ಲಿ ಹುಟ್ಟಿ ಗೋವಾ ನೆಲದಲ್ಲಿ ಹರಿದು, ಈ ಜಲಪಾತವು ಅರಬ್ಬಿ ಸಮುದ್ರ ಸೇರುತ್ತದೆ.

ಗೋವಾ ದಾರಿಗೆ ಹೊಂದಿಕೊಂಡ, ಬೆಳಗಾವಿ ಜಿಲ್ಲೆ ಖಾನಾಪುರ ತಾಲೂಕಿನ ಕಣಕುಂಬಿಯಿಂದ 5 ಕಿ.ಮೀ. ಪ್ರಯಾಣಿಸಿದರೆ ಸುರಲ್ ಎಂಬ ಪುಟ್ಟ ಗ್ರಾಮ ಸಿಗುತ್ತದೆ. ಆ ಗ್ರಾಮದ ಅಂಚಿನಲ್ಲಿ ನಿಂತು ಕಣ್ಣು ಹಾಯಿಸಿದರೆ ನೋಡಿದಷ್ಟು ದೂರ ಹಸಿರು ಹಾಸಿನ ಪರ್ವತಗಳು. ಪರ್ವತಗಳ ಮಧ್ಯದಿಂದ ಧುಮ್ಮಿಕ್ಕುವ ಜಲಪಾತ, ನಾರಿಯ ನೀಳ ಜಡೆಯಂತೆ ಗೋಚರವಾಗುತ್ತದೆ. ಸುಮಾರು 1 ಕಿ.ಮೀ ದೂರದಿಂದಲೇ ಈ ಜಲಪಾತವನ್ನು ನೋಡಬೇಕಾದ ಅನಿವಾರ್ಯತೆ ಇರುವುದರಿಂದ ಝೂಮ್ ಲೆನ್ಸ್ ಕ್ಯಾಮರಾ ಅಥವಾ ಬೈನಾಕ್ಯುಲರ್‌ನಿಂದ ವೀಕ್ಷಿಸಿದರೆ ಅತಿ ಸುಂದರವಾಗಿ ಕಾಣುತ್ತದೆ.

ಪಶ್ಚಿಮ ಘಟ್ಟದಲ್ಲಿ ಮಳೆಗಾಲ ಪ್ರಾರಂಭವಾಗುತ್ತಿದ್ದಂತೆ ನೂರಾರು ಜಲಪಾತಗಳು ಹುಟ್ಟಿಕೊಳ್ಳುತ್ತವೆ. ಆದರೆ ಸುರಲ್ ಫಾಲ್ಸ್ ಸೌಂದರ್ಯವನ್ನು ವರ್ಣಿಸಲಾಗದು. ಈ ಜಲಪಾತವು ಕಲ್ಲಿನ ಹಾಸಿಗೆ ಮೇಲೆ ರಭಸವಾಗಿ ಧುಮ್ಮಿಕ್ಕುವ ದೃಶ್ಯ ನೋಡುಗರ ಮೈ ಮರೆಸುತ್ತದೆ. ಇಲ್ಲಿನ ಪರಿಸರವೂ ಪ್ರಶಾಂತವಾಗಿದ್ದು ವಿಶ್ರಾಂತಿ ಪಡೆಯಲು ಹೇಳಿ ಮಾಡಿಸಿದ ಸ್ಥಳವಾಗಿರುವುದರಿಂದ ತಿಂಡಿ ತಿನಿಸು ತೆಗೆದುಕೊಂಡು ಬಂದರೆ ಒಳ್ಳೆಯದು.

ಜೂನ್ ತಿಂಗಳಿಂದ ಜನವರಿ ಕೊನೆಯವರೆಗೂ ಈ ಜಲಪಾತ ಮೈದುಂಬಿ ಧುಮ್ಮಿಕ್ಕುತ್ತದೆ. ಕಣಕುಂಬಿ ಪ್ರವಾಸಿ ಮಂದಿರದಲ್ಲಿ ಊಟ, ಉಪಹಾರ, ವಸತಿ ವ್ಯವಸ್ಥೆ ಇರುವುದರಿಂದ ದೂರದಿಂದ ಬಂದವರಿಗೂ ತೊಂದರೆ ಇಲ್ಲ.

ಜಲಪಾತ ನೋಡಲು ಬಂದವರು ಕಣಕುಂಬಿಯಲ್ಲಿರುವ ಪುರಾತನ ಮಾವೂಲಿ ದೇವಸ್ಥಾನ, ಮಲಪ್ರಭ ನದಿಯ ಉಗಮಸ್ಥಾನ, ಚುಗಳಾ ಪಾಯಿಂಟ್‌ನಿಂದ ಮಹಾರಾಷ್ಟ್ರದ ತಿಲಾರಿ ಡ್ಯಾಮ್‌ನ ಹಿನ್ನೀರು ಮತ್ತು ಹಸಿರಿನಿಂದ ಕಂಗೊಳಿಸುತ್ತಿರುವ ಪರ್ವತಗಳ ವಿಹಂಗಮ ನೋಟವನ್ನು ಕಣ್ತುಂಬಿಕೊಳ್ಳಬಹುದು. ಈ ಭಾಗದಲ್ಲಿ ಹಲಸು ಮತ್ತು ಖಾಜು ಹಣ್ಣು ಪ್ರಸಿದ್ಧ. ಅವುಗಳ ರುಚಿಯನ್ನೂ ಸವಿಯಬಹುದು.